<u>ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಬೈಂದೂರು</u>

ಸಿಸಿ ನಂಬ್ರ: **1141/2023** ಸಿಡಬ್ಲ್ಯೂ-**1**

ಪಿಡಬ್ಲ್ಯೂ- 1

ಸಾಕ್ಷಿದಾರರ ಹೆಸರು ಃ ಕೃಷ್ಣ

ತಂದೆಯ ಹೆಸರು ಃ ಮಾಚ

ಪ್ರಾಯ ಃ 43 ವರ್ಷ

ಉದ್ಯೋಗ ಃ ಕೂಲಿ

ವಾಸ ಃ ನಾಗೂರು

ದಿನಾಂಕಃ 17-08-2026 ರಂದು ಸಾಕ್ಷಿಯನ್ನು ಕರೆಯಿಸಿ ವಿಧಿಬದ್ಧವಾಗಿ ಪ್ರಮಾಣ ವಚನ ಭೋದಿಸಲಾಯಿತು

<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ</u>

ಚಾಸಾ 2 ನಮ್ಮ ಊರಿನವರು. ಚಾಸಾ 3 ಮತ್ತು 4 ರವರ ಪರಿಚಯವಿಲ್ಲ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

ದಿಃ 02-12-2019 ರಂದು ಚಾಸಾ 2 ರವರಿಗೆ ಹೊಟ್ಟೆ ಮತ್ತು ಕಾಲು ನೋವು ಎಂದು ತಿಳಿಸಿದ್ದು ಅವರನ್ನು ಕುಂದಾಪುರದ ಚಿನ್ಮಯ ಆಸ್ಪತ್ರೆಗೆ ಕರೆದುಕೊಂಡು ಹೋಗಲು ಒಂದು ಸ್ವಿಫ್ಟ್ ಕಾರಿನಲ್ಲಿ ಆರೋಪಿ ಚಾಲಕನಾಗಿ ನಾನು ಆತನ ಪಕ್ಕದಲ್ಲಿ ಮತ್ತು ಚಾಸಾ 2 ರವರು ಹಿಂಬದಿಯ ಸೀಟಿನಲ್ಲಿ ಕುಳಿತುಕೊಂಡು ಎಲ್ಲೂರಿನಿಂದ ಕುಂದಾಪುರಕ್ಕೆ ಹೋಗುತ್ತಿರುವಾಗ, ಉಪ್ಪುಂದ ನಂದನವನ ಬಳಿ ಸಂಜೆ 05.45 ಸಮಯ ಒಮ್ಮೆಲೆ ಒಬ್ಬ ಸೈಕಲ್ ಸವಾರ ರಸ್ತೆಯನ್ನು ದಾಟಿದ್ದು ಆಗ ಆರೋಪಿಯು ವಾಹನದ ಬ್ರೆಕನ್ನು ಒಮ್ಮೆಲೆ ಹಿಡಿದಾಗ ನಾನು ಗ್ಲಾಸ್ ಗೆ ಒಡೆದಿದ್ದು , ನನ್ನ ಎಡಗೈಯ ಭುಜದ

ಮೂಳೆ ಜಾರಿದ್ದು , ಮುಂಗೈ ಮೂಳೆ ಮುರಿತವಾಗಿದ್ದು ನಾನು ಪ್ರಜ್ಞೆ ತಪ್ಪಿ ಬಿದಿದ್ದು , ನಂತರ ನನ್ನನ್ನು ಅಂಜಲಿ ಆಸ್ಪತ್ರೆಗೆ ದಾಖಲಿಸಿದ್ದು ಅಲ್ಲಿ ನನಗೆ ಪ್ರಜ್ಞೆ ಬಂದಿರುತ್ತದೆ. ಚಾಲಕ ಮತ್ತು ಸಹ ಸವಾರನಿಗೆ ಏನು ಆಗಿದೆ ಎಂದು ನನಗೆ ಗೊತ್ತಾಗಿರುವುದಿಲ್ಲ. ನಂತರ ಆಸ್ಪತ್ರೆಯಲ್ಲಿ ಪೊಲೀಸರು ಒಂದು ದಾಖಲೆಗೆ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ.

ಸಾಕ್ಷಿಯು ದೂರಿನಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಸದ್ರಿ ದೂರನ್ನು ನಿ.ಪಿ.1 ಎಂದು ಸಾಕ್ಷಿಯವರ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು.

ನಂತರ ನಾನು ಆಸ್ಪತ್ರೆಯಿಂದ ಚಿಕಿತ್ಸೆ ಪಡೆದು ಮನೆಗೆ ಬಂದಿರುತ್ತೇನೆ. ಬೇರೆ ಏನಾಗಿದೆ ಎಂದು ನನಗೆ ಗೊತ್ತಿರುವುದಿಲ್ಲ. ನಂತರ ಒಂದು ದಿನ ಪೊಲೀಸರು ಅಪಘಾತ ಸ್ಥಳಕ್ಕೆ ಕರೆಸಿದ್ದು ಅಲ್ಲಿಂದ ಠಾಣೆಗೆ ಕರೆದುಕೊಂಡು ಹೋಗಿ ಎರಡು ಸಹಿಯನ್ನು ಪಡೆದುಕೊಂಡಿರುತ್ತಾರೆ. ಸಾಕ್ಷಿಯು ತಕ್ಷೀರು ಸ್ಥಳ ಮಹಜರು, ಸ್ವತ್ತು ಸ್ವಾಧೀನತಾ ಮಹಜರು ಹಾಗು ಕರಡು ನಕಾಶೆಯಲ್ಲಿ ತಮ್ಮ ಸಹಿಗಳನ್ನು ನೋಡಿ ಗುರುತಿಸಿದ್ದು, ಸದ್ರಿ ಸಹಿಗಳನ್ನು ಪೊಲೀಸ್ ಠಾಣೆಯಲ್ಲಿ ಹಾಕಿರುತ್ತೇನೆ ಎಂದು ತಿಳಿಸಿದ್ದು ತಕ್ಷೀರು ಸ್ಥಳ ಮಹಜರನ್ನು ಮಹಜರನ್ನು ನಿ.ಪಿ.2 ಎಂದು, ಸ್ವತ್ತು ಸ್ವಾಧೀತನಾ ಮಹಜರನ್ನು ನಿಪಿ 3 ಎಂದು, ಕರಡು ನಕಾಶೆಯನ್ನು ನಿ.ಪಿ.4 ಎಂದು,ಅದರಲ್ಲಿರುವ ಸಾಕ್ಷಿಯವರ ಸಹಿಯನ್ನು ನಿ.ಪಿ.2(ಎ), ನಿ.ಪಿ.3(ಎ) ಮತತು ನಿಪಿ 4(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಸ್ಥಳ ಮಹಜರಿನ ಸಮಯದಲ್ಲಿ ತೆಗೆದ ಭಾವಚಿತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 5 ಎಂದು ಗುರುತಿಸಲಾಯಿತು. ಸ್ವಿಫ್ ಕಾರನ್ನು ನೋಡಿದರೆ ಗುರುತಿಸಬಹುದು. ಸಾಕ್ಷಿಯು ಕಾರಿನ ಭಾವಚಿತ್ರವನ್ನು ನೋಡಿ ಗುರುತಿಸಿದ್ದು ಅದನ್ನು ಒಟ್ಟಾಗಿ ನಿಪಿ 6 ಎಂದು ಗುರುತಿಸಲಾಯಿತು. ಸೈಕಲನ್ನು ನೋಡಿದರೆ ಗುರುತಿಸಲು ಸಾಧ್ಯವಿಲ್ಲ. ಸಾಕ್ಷಿಯು ಸೈಕಲ್ ನ ಭಾವಚಿತ್ರವನ್ನು ನೋಡಿ ಗುರುತಿಸಿರುವುದಿಲ್ಲ. ಪೊಲೀಸರು ನನ್ನನ್ನು ವಿಚಾರಣೆ ಮಾಡಿರುವುದಿಲ್ಲ , ಅವರ ಮುಂದೆ ಹೇಳಿಕೆಯನ್ನು ನೀಡಿರುವುದಿಲ್ಲ.

(ಈ ಹಂತದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು ಪ್ರತಿಕೂಲ ಸಾಕ್ಷ್ಯ ಎಂದು ಪರಿಗಣಿಸಲು ವಿನಂತಿಸಿಕೊಂಡಿದ್ದರಿಂದ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ

ಸಹಾಯಕ ಸರ್ಕಾರಿ ಅಭಿಯೋಜಕರಿಗೆ ಪಾಟಿ ಸವಾಲಿಗೆ ಅನುಮತಿ ನೀಡಲಾಯಿತು)

ಪಾಟಿ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ

ದಿಃ 02-12-2019 ರಂದು ಕೆಎ 20 ಎಮ್ಎ 4185 ಸ್ವಿಫ್ಟ್ ಕಾರಿನಲ್ಲಿ ನೀವು ಮತ್ತು ಚಾಸಾ 2 ರವರು ಕುಳಿತುಕೊಂಡು ಕುಂದಾಪುರ ಕಡೆಗೆ ಹೋಗುತ್ತಿರುವಾಗ ಆರೋಪಿಯು ಸಂಜೆ 05.45 ಗಂಟೆಗೆ ಬೈಂದೂರು ತಾಲೂಕು ನಂದನವನ ಗ್ರಾಮದ ಶ್ರೀ ದಾಮೋದರ ಆಟೋ ಸ್ಟೋರ್ಸ್ ಬಳಿ ಕಾರನ್ನು ಅತಿವೇಗ ಹಾಗು ಅಜಾಗರೂಕತೆಯಿಂದ ಚಲಾಯಿಸಿ ರಾಷ್ಟ್ರೀಯ ಹೆದ್ದಾರಿ ಯು ಟನರ್ ಬಳಿ ಕಾರನ್ನು ರಸ್ತೆಯ ಪಶ್ಚಿಮ ಬದಿಗೆ ಚಲಾಯಿಸಿ ಬೈಸಿ ಕಲ್ ಸವಾರಿ ಮಾಡಿಕೊಂಡು ರಸ್ತೆ ದಾಟುತ್ತಿದ್ದ ಸೈಕಲ್ ಗೆ ಹಿಂಭಾಗಕ್ಕೆ ಡಿಕ್ಕಿ ಹೊಡೆದಿರುತ್ತಾರೆ ಎಂದರೆ ಸರಿಯಲ್ಲ.

ಸದರಿ ಡಿಕ್ಕಿಯ ಪರಿಣಾಮ ಸೈಕಲ್ ಸವಾರ ರಸ್ತೆಗೆ ಬಿದ್ದು ಆತನ ತಲೆಗೆ ತೀವ್ರ ಸ್ವರೂಪದ ಗಾಯವಾಗಿದ್ದು , ದಾರಿ ಮಧ್ಯದಲ್ಲಿ ಮೃತಪಟ್ಟಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಮೃತ ಪಟ್ಟ ವ್ಯಕ್ತಿಯಹೆಸರು ನಾಗಯ್ಯ ಪೂಜಾರಿ ಎಂದು ತಿಳಿಯಿತು ಎಂದರೆ ಸರಿಯಲ್ಲ. ಈ ಬಗ್ಗೆ ದಿಃ 02-12-2019 ರಂದು ನಿಪಿ 1 ರಂತೆ ನೀವು ಪೊಲೀಸರು ಬೈಂದೂರಿನ ಅಂಜಲಿ ಆಸ್ಪತ್ರೆಗೆ ಬಂದಾಗ ದೂರನ್ನು ನೀಡಿರುತ್ತೀರಿ ಎಂದರೆ ಸರಿಯಲ್ಲ.

ದಿಃ 04-12-2019 ರಂದು ನೀವು ಪೊಲೀಸರಿಗೆ ಅಪಘಾತ ಸ್ಥಳವನ್ನು ತೋರಿಸಿದಂತೆ ಪೊಲೀಸರು ಚಾಸಾ 11 ಮತ್ತು 12 ರವರ ಸಮಕ್ಷಮ ಅಪಘಾತ ಸ್ಥಳವನ್ನು ಪರಿಶೀಲಿಸಿ ಬೆಳಗ್ಗೆ 11.00 ಗಂಟೆಯಿಂದ 12.00 ಗಂಟೆಯವರೆಗೆ ನಿಪಿ 2 ರಂತೆ ಸ್ಥಳ ಮಹಜರನ್ನು, ನಿಪಿ 4 ರಂತೆ ಕರಡು ನಕಾಶೆಯನ್ನು ತಯಾರಿಸಿ, ನಿಪಿ 5 ರಂತೆ ಭಾವಚಿತ್ರವನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ನಂತರ ಅದೇ ದಿನ ಬೆಳಗ್ಗೆ 09.30 ರಿಂದ 10.00 ಗಂಟೆವರೆಗೆ ನಿಮ್ಮ ಸಮಕ್ಷಮ ಚಾಸಾ 11 ಮತ್ತು 12 ರವರ ಸಮಕ್ಷಮ ನೀವು ಹಾಜರುಪಡಿಸಿದ ಕೆಎ 20 ಎಮ್ ಎ 4185 ಅಪಘಾತ ಪಡಿಸಿದ ವಾಹನವನ್ನು ಹಾಗು ಬೈಸಿಕಲನ್ನು ಪೊಲೀಸರು ನಿಮ್ಮ ಸಮಕ್ಷಮ ನಿಪಿ 3 ರಂತೆ ಮಹಜರನ್ನು ತಯಾರಿಸಿ

ವಶಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ದಿಃ 05-12-2019 ರಂದು ಪೊಲೀಸರ ಮುಂದೆ ಮರು ಹೇಳಿಕೆ ನೀಡುವಾಗ ಸಂಜೆ 05.45 ಗಂಟೆಗೆ ……………………………………………..ನಾನು ತಿಳಿದುಕೊಂಡೆನು ಎಂದು

ಎಂದು ಈಗ ಹೇಳಿದಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ನಿರಾಕರಿಸಿದ ಹೇಳಿಕೆಯನ್ನು ನಿಪಿ 7 ಎಂದು ಗುರುತಿಸಲಾಯಿತು. ಅಪಘಾತದ ಸಮಯದಲ್ಲಿ ಸೈಕಲನ್ನುನೋಡಿದರೂ ಕೂಡಾ ನ್ಯಾಯಾಲಯದಲ್ಲಿ ನೋಡಿ ಗುರುತಿಸಿಸುತ್ತಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟಿ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಮ್.ಪಿ.ಸಿ. ರವರಿಂದ</u>

ಆ ದಿನ ನೀವು ಹೋಗುತ್ತಿದ್ದ ವಾಹನ ಎಷ್ಟು ವೇಗದಲ್ಲಿ ಹೋಗುತ್ತಿತ್ತು ಎಂದರೆ ಸಾಕ್ಷಿಯು ಮಧ್ಯಮ ವೇಗದಲ್ಲಿ ಹೋಗುತ್ತಿತ್ತು ಎಂದು ನುಡಿಯುತ್ತಾರೆ. ಅಪಘಾತ ಸಮಯ ಆರೋಪಿಯ ಅಜಾಗರೂಕತೆ ನಿಮಗೆ ಕಂಡುಬಂದಿರುವುದಿಲ್ಲ ಎಂದರೆ ಸರಿ. ಅಪಘಾತಕ್ಕೆ ಸೈಕಲ್ ಸವಾರನ ಅಜಾಗರೂಕತೆಯೇ ಕಾರಣ ಎಂದರೆ ಸರಿ.

<u>ಮರು ವಿಚಾರಣೆಃ</u> ಇಲ್ಲ

(ತೆರದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸ.ಇದೆ

**ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,**
ಬೈಂದೂರು